ಅಸಲು ದಾವಾ ಸಂಖ್ಯೆ 56/2017

ಪಿ ಡಬ್ಲ್ಯೂ: 1

**ದಿನಾಂಕ : 07.07.2026ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ – ಪ್ರತಿವಾದಿಗಳ ಪರವಾಗಿ ಶ್ರೀ ಎನ್ ಆರ್ ಕೆ ವಕೀಲರಿಂದಃ**

ದಾವಾ ಅನುಸೂಚಿತ ಸ್ವತ್ತು ಮನೆ ಮುಂದೆ ಬಿಟ್ಟ ಖಾಲಿ ಜಾಗ ಆಗಿರುತ್ತದೆ. ದಿನಾಂಕಃ 11.07.1987 ರಲ್ಲಿ ಒಂದು ಕರಾರು ಆಗಿತ್ತು ಎಂಬುದಾಗಿ ತಿಳಿಸಿರುತ್ತೇನೆ, ಆ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಸದರಿ ಕರಾರು ಯಾರ ಯಾರ ನಡುವೆ ಆಗಿತ್ತು ಎಂಬುದು ನನಗೆ ಗೊತ್ತಿಲ್ಲ. ಸದರಿ ಕರಾರು ಯಾವ ಸ್ವತ್ತಿಗೆ ಸಂಬಂಧಿಸಿದಂತೆ ಆಗಿತ್ತು ಎಂಬುದು ನನಗೆ ಗೊತ್ತಿಲ್ಲ ಎಂದರೆ ಸರಿ. ಪ್ರತಿವಾದಿಗಳು ಕಂಬ ನಿಲ್ಲಿಸುತ್ತಿದ್ದರು ಅದನ್ನು ತಡೆದಿರುತ್ತೇನೆ ಹಾಗಾಗಿ ಈ ದಾವೆ ದಾಖಲು ಮಾಡಿರುತ್ತೇನೆ.

ಸಾಕ್ಷಿಗೆ ಒಂದು ಫೋಟೋ ತೋರಿಸಿದಾಗ ಸಾಕ್ಷಿಯು, ಅದರಲ್ಲಿರುವ ಮನೆ ಪ್ರತಿವಾದಿಯ ಮನೆ ಎಂದು ನುಡಿದು ಒಪ್ಪಿದ ಮೇರೆಗೆ ಅದನ್ನು ನಿಡಿ–1 ಎಂದು ಗುರುತಿಸಲಾಯಿತು. (ಈ ಹಂತದಲ್ಲಿ ವಾದಿ ಪರ ವಕೀಲರು ಸದರಿ ಫೋಟೋಗೇ ಸಿ ಡಿ ಇಲ್ಲದೇ ಇದ್ದ ಕಾರಣ ಗುರುತಿಸಲು ತಕರಾರು ಮಾಡಿರುತ್ತಾರೆ ಆದರೆ ಸಾಕ್ಷಿಯು ಸದರಿ ಫೋಟೋದಲ್ಲಿ ಇರುವ ಸಂಗತಿಯನ್ನು ನೋಡಿ ಒಪ್ಪಿದ ಕಾರಣ ಈ ಹಂತದಲ್ಲಿ ಸದರಿ ಫೋಟೋಗೆ ಸಂಬಂಧಿಸಿದ ಸಿ ಡಿ ಅವಶ್ಯಕತೆ ಇರುವುದಿಲ್ಲ. ಹಾಗಾಗಿ ವಾದಿಯ ಪರ ವಕೀಲರು ಎತ್ತಿದ ತಕರಾರನ್ನು ತಿರಸ್ಕರಿಸಲಾಗಿದೆ.). ನಿಡಿ–1 ರಲ್ಲಿರುವ ಮನೆಯನ್ನು ಪ್ರತಿವಾದಿಗಳು ಅವರ ಸ್ವತ್ತಿನಲ್ಲಿ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ನಮ್ಮ ಸ್ವತ್ತಿನಲ್ಲಿ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿಯಾಗಿ ನಮ್ಮ ಸ್ವತ್ತಿನಲ್ಲಿ ಮನೆ ನಿರ್ಮಾಣ ಮಾಡಿರುತ್ತಾರೆ ಎಂಬುದನ್ನು ವಾದಪತ್ರದಲ್ಲಿ ಬರೆಸಿರುತ್ತೇನೆ. ಪ್ರತಿವಾದಿಗಳು ಎಷ್ಟು ಸ್ವತ್ತನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ ಎಂಬ ಬಗ್ಗೆ ವಾದಪತ್ರದಲ್ಲಿ ನಮೂದು ಮಾಡಿರುತ್ತೇವೆ. ನಿಖರವಾಗಿ ಎಷ್ಟು ಸ್ವತ್ತನ್ನು ಒತ್ತುವರಿ ಮಾಡಿಕೊಳ್ಳಲಾಗಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಪ್ರತಿವಾದಿ ನಮ್ಮ ಜಾಗದಲ್ಲಿ ಮನೆ ಕಟ್ಟಿಕೊಂಡಿರುತ್ತಾರೆ ಎಂಬುದಾಗಿ ಹೇಳಿದ್ದು ಆ ಬಗ್ಗೆ ದಾಖಲಾತಿಗಳನ್ನು ಕೊಟ್ಟಿರುತ್ತೇನೆ. ಯಾವ ದಾಖಲಾತಿ ಎಂದರೆ ನನಗೆ ಹೇಳಲು ಬರುವುದಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ನಿಡಿ–1 ರ ಮನೆ ನಿರ್ಮಾಣ ಮಾಡುವ ಮೊದಲು ಅಡಿಪಾಯ ಹಾಕಿದ್ದರು ಎಂದರೆ ಸರಿ. ಸಾಕ್ಷಿಗೆ ಈಗ ಒಂದು ಫೋಟೋ ತೋರಿಸಿ, ಅದರಲ್ಲಿ ಕಾಣುತ್ತಿರುವ ಅಡಿಪಾಯವು ನಿಡಿ–1 ರಲ್ಲಿ ಕಾಣುತ್ತಿರುವ ಮನೆಯದ್ದಾಗಿರುತ್ತದೆ ಎಂದರೆ ಸಾಕ್ಷಿಯು ಸರಿ ಎಂದು ಒಪ್ಪಿದ ಕಾರಣ ಸದರಿ ಫೋಟೋವನ್ನು ನಿಡಿ–2 ಎಂದು ಗುರುತಿಸಲಾಯಿತು. ನಿಡಿ–2 ರಲ್ಲಿ ಕಾಣುತ್ತಿರುವ ಹಸಿರುವ ಬಣ್ಣ ಇರುವ ಮನೆ ನನ್ನದು ಎಂದರೆ ಸರಿ. ನಿಡಿ–2 ರಲ್ಲಿ ಕಾಣುತ್ತಿರುವ ನಿರ್ಮಾಣ ಮಾಡುತ್ತಿರುವ ಕಟ್ಟಡ ಹಾಗೂ ನಮ್ಮ ಮನೆಯ ನಡುವೆ 6 ರಿಂದ 8 ಅಡಿಗಳ ಸ್ವತ್ತು ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು, ಅದು ನಮ್ಮ ಜಾಗ ಎಂದು ನುಡಿಯುತ್ತಾರೆ. ಸದರಿ ಸ್ವತ್ತು ನಿಮ್ಮದು ಎಂದು ಹೇಳಲು ದಾಖಲಾತಿ ಇದೆಯೇ ಎಂದರೆ ಸಾಕ್ಷಿಯು ಅದನ್ನು ಬರೆಸಿರುತ್ತೇವೆ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.

ದಾವಾ ಅನುಸೂಚಿತ ಸ್ವತ್ತು ನಮ್ಮ ಮನೆಯ ಯಾವ ಭಾಗದಲ್ಲಿ ಇರುತ್ತದೆ ಎಂಬುದು ನನಗೆ ಗೊತ್ತಾಗುವುದಿಲ್ಲ. ದಾವಾ ಅನುಸೂಚಿತ ಸ್ವತ್ತು ಭೌತಿಕವಾಗಿ ಅಸ್ತಿತ್ವದಲ್ಲಿ ಇಲ್ಲದೇ ಇದ್ದರೂ ಸಹಾ ನಾನು ಸುಳ್ಳು

ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿತ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿತ ಸ್ವತ್ತಿನ ಪೂರ್ವಭಾಗದಲ್ಲಿ ಹಲಗಯ್ಯರವರ ಮನೆ, ಪಶ್ಚಿಮ ಭಾಗಕ್ಕೆ ದೊಡ್ಡಿ ಇದ್ದು ಈಗ ಬಾಲವಾಡಿ ಇದ್ದು ಅದರ ಪಕ್ಕದಲ್ಲಿ ರಸ್ತೆ, ಉತ್ತರ ಭಾಗದಲ್ಲಿ ಹಲಗಯ್ಯನವರ ಮನೆ ಇರುತ್ತದೆ, ದಕ್ಷಿಣಭಾಗದಲ್ಲಿ ಪ್ರತಿವಾದಿಯ ಮನೆ ಇರುತ್ತದೆ.

ನನ್ನ ಮತ್ತು ಪ್ರತಿವಾದಿಯ ನಡುವೆ ವೈಮನಸ್ಸು ಇದೆ ಎಂದರೆ ಸಾಕ್ಷಿಯು ಈ ಮೊದಲೇ ಕೇಸು ಹಾಕಿರುತ್ತೇವೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ತೊಂದರೆ ಕೊಡದೇ ಇದ್ದರೂ ಈ ದಾವೆಯನ್ನು ದಾಖಲು ಮಾಡಿರುತ್ತೇ ಎಂದರೆ ಸರಿಯಲ್ಲ. ಸ್ವತ್ತಿಗೂ ನನಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ

(ಕಾವ್ಯಶ್ರೀ. ಎಂ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ., ಕೊಳ್ಳೇಗಾಲ